ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 10-01-1994.

# *ವರ್ತಮಾನ ಸೀಸನ್‌ನಲ್ಲಿ ಬಿಂದು ಎಂಬ ಶಬ್ದವನ್ನು ಮೂರು ರೂಪಗಳಲ್ಲಿ ಸ್ಮೃತಿ ಅಥವಾ ಸ್ವರೂಪದಲ್ಲಿ ತರುವುದೇ ಸುರಕ್ಷತೆಯ ಸಾಧನವಾಗಿದೆ*

(वर्तमान सीजन में एक पॉइन्ट शब्द को तीन रूपों से स्मृति वा स्वरूप में लाना-यही सेफ्टी का साधन है)

***ಮಾಯೆಯ ಛಾಯೆಯಿಂದ ಸುರಕ್ಷಿತವಾಗಿ ಇರಲು ಲೈಟ್, ಮೈಟ್ ಸ್ವರೂಪದಲ್ಲಿ ಸ್ಥಿತರನ್ನಾಗಿ ಮಾಡುವ ಸರ್ವಸ್ನೇಹಿ ಬಾಪ್‌ದಾದಾ ಮಾತನಾಡುತ್ತಿದ್ದಾರೆ.***

ವಿಶ್ವ ಕಲ್ಯಾಣಕಾರಿ ಬಾಪ್‌ದಾದಾರವರು ತಮ್ಮ ಎಲ್ಲಾ ಮಾಸ್ಟರ್ ವಿಶ್ವ ಕಲ್ಯಾಣಕಾರಿ ಮಕ್ಕಳನ್ನು ನೋಡುತ್ತಿದ್ದಾರೆ. ಪ್ರತಿಯೊಂದು ಮಕ್ಕಳ ಈ ಬ್ರಾಹ್ಮಣ ಜೀವನದ ಲಕ್ಷ್ಯವು ಅತ್ಯಂತ ಶ್ರೇಷ್ಠವಾದುದು ಆಗಿದೆ. ಲಕ್ಷ್ಯವಂತೂ ಎಲ್ಲರಲ್ಲಿ ನಂಬರ್‌ವನ್ ಆಗುವುದಿದೆ ಆದರೆ ಲಕ್ಷಣವು ನಂಬರ್‌ವಾರ್ ಆಗಿದೆ. ಹಾಗಾದರೆ ಲಕ್ಷ್ಯ ಮತ್ತು ಲಕ್ಷಣ ಇವೆರಡರಲ್ಲಿ ಅಂತರವೇಕೆ ಇದೆ? ಜ್ಞಾನ ದಾತಾ ತಂದೆಯು ಒಬ್ಬರೇ ಆಗಿದ್ದಾರೆ. ಯೋಗದ ವಿಧಿಯೂ ಒಂದೇ ಆಗಿದೆ. ದಿವ್ಯ ಗುಣಗಳ ಧಾರಣೆ ಮಾಡುವ ಸಹಜ ಪ್ರತ್ಯಕ್ಷ ಪ್ರಮಾಣವಾಗಿ ಸಾಕಾರ ಬ್ರಹ್ಮಾತಂದೆಯೂ ಒಬ್ಬರೇ ಆಗಿದ್ದಾರೆ. ಸೇವೆಯ ಸಾಧನ ಹಾಗೂ ಸೇವೆಯ ವಿಧಿಯನ್ನು ಕಲಿಸುವವರೂ ಸಹ ಒಬ್ಬರೇ ಆಗಿದ್ದಾರೆ. ಮುಖ್ಯವಾದ ಮಾತು- ವಿದ್ಯೆ ಹಾಗೂ ಪಾಲನೆ- ಇವೆರಡನ್ನೂ ಕೊಡುವವರು ಒಬ್ಬರು ಮತ್ತು ಮೊದಲ ನಂಬರಿನವರು. ಇಷ್ಟಿದ್ದರೂ ಪ್ರತ್ಯಕ್ಷ ಜೀವನದಲ್ಲಿ ಲಕ್ಷಣವು ನಂಬರ್‌ವಾರ್ ಏಕೆ? ಲಕ್ಷಣವನ್ನು ಧಾರಣೆ ಮಾಡಿಕೊಳ್ಳುವುದರಲ್ಲಿ ನಾನು ಯಾವ ನಂಬರಿನವನು ಆಗಿದ್ದೇನೆ? ಎಂಬುದರಲ್ಲಿ ತಮ್ಮನ್ನು ತಾವೇ ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೀರಿ. ನಂಬರ್‌ವಾರ್ ಆಗಲು ವಿಶೇಷ ಆಧಾರ- ಒಂದೇ ಶಬ್ದ 'ಬಿಂದು'. ಬಿಂದು ಸ್ವರೂಪವನ್ನು ಅನುಭವ ಮಾಡುವುದು, ಇನ್ನೊಂದು - ಯಾವುದೇ ಸಂಕಲ್ಪ, ಮಾತು ಅಥವಾ ಕರ್ಮವು ವ್ಯರ್ಥವಿದೆಯೆಂದರೆ ಅದಕ್ಕೆ ಬಿಂದುವನ್ನಿಡುವುದು. ಮೂರನೆಯದು- ಜ್ಞಾನದ ಅಥವಾ ಧಾರಣೆಯ ಅನೇಕ ಬಿಂದುಗಳನ್ನು ಮನನ ಮಾಡುತ್ತಾ ಸ್ವಯಂನಪ್ರತಿ ಅಥವಾ ಸೇವೆಗಾಗಿ ಸಮಯಾನುಸಾರ ಕಾರ್ಯದಲ್ಲಿ ಉಪಯೋಗಿಸುವುದು. ಹಾಗಾದರೆ ಶಬ್ಧವಂತು ಒಂದು 'ಬಿಂದು'ವಷ್ಟೇ ಆದರೆ ಮೂರು ರೂಪಗಳಲ್ಲಿ ಬಿಂದುವನ್ನು ಸಮಯಾನುಸಾರ ಸ್ಮೃತಿಯಲ್ಲಿ, ಸ್ವರೂಪದಲ್ಲಿ ತರಬೇಕು. ಇದರಲ್ಲಿ ವ್ಯತ್ಯಾಸವಾಗುತ್ತಿದೆ. ಕೆಲವೊಮ್ಮೆ ಬಾಪ್‌ದಾದಾರವರು ಎಲ್ಲಾ ಮಕ್ಕಳನ್ನು ನೋಡುತ್ತಾರೆ- ಇವರು ಸ್ಮೃತಿಯಲ್ಲಿ ಬಹಳ ಬುದ್ಧಿವಂತರಾಗುತ್ತಾರೆ. ಹೀಗಾಗಬೇಕು, ಇದು ಸರಿ, ಇದು ತಪ್ಪು ಎನ್ನುವುದನ್ನೂ ಯೋಚಿಸುತ್ತಿರುತ್ತಾರೆ ಮತ್ತು ಈ ತಿಳುವಳಿಕೆಯೂ ಇಮರ್ಜ್ ಆಗುತ್ತದೆ. ಜ್ಞಾನವೆಂದರೆ ನಾಲೆಡ್ಜ್. ನಾಲೆಡ್ಜ್ ಐಸ್ ಲೈಟ್ (ಜ್ಞಾನವೆಂದರೆ ಪ್ರಕಾಶತೆ), ನಾಲೆಡ್ಜ್ ಇಸ್ ಮೈಟ್ (ಜ್ಞಾನವೆಂದರೆ ಶಕ್ತಿಯೆಂದು) ಹೇಳಲಾಗುತ್ತದೆ. ಹಾಗಾದರೆ ಎಲ್ಲಿ ಪ್ರಕಾಶತೆಯಿದೆಯೋ, ಶಕ್ತಿಯಿದೆಯೋ ಅಲ್ಲಿ ಇದಾಗಬೇಕು

ಆದರೆ ಆಗುವುದಿಲ್ಲ ಎಂದು ಹೇಳುವುದಿಲ್ಲ. ಆಗ ಏನು ಯೋಚಿಸುತ್ತಾರೆ ಎಂದರೆ ಬಾಪ್‌ದಾದಾರವರು ಈ ರೀತಿ ಆಗಬೇಕು ಎಂಬ ಜ್ಞಾನವಂತೂ ಹೇಳುತ್ತಾರೆ. ಆದರೆ ಆ ಸಮಯದಲ್ಲಿ ನನ್ನಲ್ಲೇನಿದೆಯೋ ಅದನ್ನು ಉಪಯೋಗಿಸಬೇಕು. ಆದರೆ ಅವರು ಬೇಕು-ಬೇಕು ಎನ್ನುವುದರಲ್ಲಿಯೇ ನಿಂತುಬಿಡುತಾರೆ. ಇದರ ಅರ್ಥ- ಜ್ಞಾನವನ್ನು ಪ್ರಕಾಶತೆ ಹಾಗೂ ಶಕ್ತಿಯ ರೂಪದಲ್ಲಿ ತಂದು ಸಮಯದನುಸಾರ ಕಾರ್ಯದಲ್ಲಿ ಉಪಯೋಗಿಸಲು ಸಾಧ್ಯವಾಗುತ್ತಿಲ್ಲ. ಇದಕ್ಕೇ ಸ್ಮೃತಿಯಲ್ಲಿದೆ ಆದರೆ ಸ್ವರೂಪದಲ್ಲಿ ತರುವಂತಹ ಶಕ್ತಿಯ ಕೊರತೆಯಿದೆ ಎಂದು ಹೇಳಲಾಗುತ್ತದೆ. ಯಾವಾಗ ಇದು ರೈಟ್, ಇದು ರಾಂಗ್. ಇದು ಅಂಧಕಾರ, ಇದು ಪ್ರಕಾಶತೆ. ಇದು ವ್ಯರ್ಥ ಇದು ಸಮರ್ಥ ಎಂದು ತಿಳಿಯುವಂತಹ ತಿಳುವಳಿಕೆಯಿದೆಯೋ, ಅಂದಮೇಲೆ ಅಂಧಕಾರವೆಂದು ತಿಳಿಯುತ್ತಿದರೂ ಅಂಧಕಾರದಲ್ಲಿಯೇ ಇರುವವರನ್ನು ಜ್ಞಾನಿ ಅಥವಾ ಬುದ್ಧಿವಂತರೆಂದು ಹೇಳುವರೇ? ಜ್ಞಾನಿ ಅಲ್ಲದಿದ್ದರೆ ಏನಾದಿರಿ? ಭಕ್ತನೇ ಅಥವಾ ಅರ್ಧಂಬರ್ಧ ಜ್ಞಾನಿಯೇ? ರಾಂಗ್ ಎಂದು ತಿಳಿಯುತ್ತಿದ್ದರೂ ರಾಂಗ್ ಕರ್ಮಗಳ ಅಥವಾ ಸಂಕಲ್ಪಗಳ ಅಥವಾ ಸ್ವಭಾವ-ಸಂಸ್ಕಾರಗಳಲ್ಲಿಯೇ ವಶರಾದರೆ ಏನೆಂದು ಹೇಳಲಾಗುವುದು? ಅವರ ಬಿರುದೇನಾಗಬೇಕು? ಬಾಪ್‌ದಾದಾರವರು ಸಮಯದ ಗತಿಯನ್ನು ನೋಡುತ್ತಾ, ಎಲ್ಲ ಮಕ್ಕಳ ಗಮನವನ್ನು ಪದೇ-ಪದೇ ಸೆಳೆಯುತ್ತಾ ಇರುತ್ತಾರೆ.

'ಅಟೆನ್ಶನ್'(ಗಮನ) ಶಬ್ಧವನ್ನು ಡಬಲ್ ಅಂಡರ್‌ಲೈನ್ ಮಾಡಿಸುತ್ತಿದ್ದಾರೆ- ಈ ಪ್ರಕೃತಿಯ ತಮೋಗುಣಿ ಶಕ್ತಿ ಹಾಗೂ ಮಾಯೆಯ ಸೂಕ್ಷ್ಮವಾದ ರಾಯಲ್ ಬುದ್ಧಿವಂತಿಯ ಶಕ್ತಿಯು ತನ್ನ ಕಾರ್ಯವನ್ನು ಬಹಳ ತೀವ್ರಗತಿಯಿಂದ ಮಾಡುತ್ತಿದೆ ಹಾಗೂ ಮಾಡುತ್ತಿರುತ್ತದೆ. ಪ್ರಕೃತಿಯ ಭಯಾನಕ ರೂಪವನ್ನು ತಿಳಿಯುವುದಂತೂ ಸಹಜ. ಆದರೆ ಭಿನ್ನ-ಭಿನ್ನ ಭಯಾನಕ ಏರುಪೇರುಗಳಲ್ಲಿ ಅಚಲರಾಗಿರುವುದರಲ್ಲಿ ಇನ್ನೂ ಗಮನವಿರಬೇಕು. ಮಾಯೆಯ ಅತಿಸೂಕ್ಷ್ಮ ವಾದ ಸ್ವರೂಪವನ್ನು ತಿಳಿಯುವುದರಲ್ಲಿಯೂ ಮೋಸಕ್ಕೊಳಗಾಗುತ್ತಾರೆ. ಮಾಯೆಯು ಅಂತಹ ರಾಯಲ್ ರೂಪವನ್ನಿಡುತ್ತದೆ. ಅದರಿಂದ ರಾಂಗ್‌ನ್ನು ರೈಟ್ ಎಂಬ ಅನುಭವ ಮಾಡಿಸುತ್ತದೆ. ಅದಂತು ಸಂಪೂರ್ಣವಾಗಿ ರಾಂಗ್ ಇರುತ್ತದೆ ಆದರೆ ಬುದ್ಧಿಯನ್ನು ಈ ರೀತಿಯಲ್ಲಿ ಪರಿವರ್ತನೆ ಮಾಡಿಬಿಡುತ್ತದೆ, ಅದರಿಂದ 'ಸತ್ಯ ತಿಳುವಳಿಕೆಯನ್ನೂ ಹಾಗು ಅನುಭೂತಿಯ ಶಕ್ತಿಯನ್ನೂ ಮಾಯ ಮಾಡಿಬಿಡುತ್ತದೆ. ಹೇಗೆ ಯಾರಾದರೂ ಜಾದೂ ಮಂತ್ರವನ್ನು ಮಾಡುತ್ತಾರಲ್ಲವೆ. ಅದರಿಂದ ಪರವಶರಾಗಿಬಿಡುತ್ತಾರೆ. ಅನುಭೂತಿಯ ಶಕ್ತಿಯನ್ನು ಮಾಯೆ ಮಾಡುವ ರಾಯಲ್ ಮಾಯೆಯ ಸತ್ಯತೆಯನ್ನೂ ತಿಳಿದುಕೊಳ್ಳದೇ ಇರುವಷ್ಟು ಮಾಡಿಬಿಡುತ್ತದೆ. ಅದು ಸಂಪೂರ್ಣ ಅಸತ್ಯವೇ ಆಗಿರುತ್ತದೆ ಆದರೆ ಮಾಯೆಯ ಛಾಯೆಯ(ನೆರಳು) ವಶರಾಗಿರುವ ಕಾರಣದಿಂದ ತಪ್ಪನ್ನೇ ಸರಿಯೆಂದು ತಿಳಿಯುತ್ತಾರೆ ಹಾಗೂ ಸಿದ್ಧ ಮಾಡುವುದರಲ್ಲಿ ಮಾಯೆಯ ಸುಪ್ರೀಂ ಕೋರ್ಟಿನ ವಕೀಲರಾಗಿಬಿಡುತ್ತಾರೆ. ಹಾಗಾದರೆ ವಕೀಲರು ಏನು ಮಾಡುತ್ತಾರೆ? ಸುಳ್ಳನ್ನೇ ಸತ್ಯವೆಂದು ಸಿದ್ಧ ಮಾಡುವುದರಲ್ಲಿ ಬುದ್ಧಿವಂತರಾಗಿರುತ್ತಾರೆ. ಸತ್ಯವನ್ನು ಸತ್ಯವೆಂದು ಸಿದ್ಧ ಮಾಡುವುದರಲ್ಲಿಯೂ ಇರುತ್ತಾರೆ ಆದರೆ ಅಸತ್ಯವನ್ನು ಸತ್ಯವೆಂದು ಸಿದ್ಧ ಮಾಡುವುದರಲ್ಲಿ ಬುದ್ಧಿವಂತರಾಗಿರುತ್ತಾರೆ. ಎರಡರಲ್ಲಿಯೂ ಬುದ್ಧಿವಂತರಾಗಿರುತ್ತಾರೆ ಆದ್ದರಿಂದ ಬಾಪ್ ದಾದಾರವರು 'ಗಮನ' ಇಡುವುದರಲ್ಲಿ ಡಬಲ್ ಅಂಡರ್‌ಲೈನ್ ಮಾಡಿಸುತ್ತಿದ್ದಾರೆ, ಅನುಭೂತಿಯ ಶಕ್ತಿಯನ್ನು ಪರಿವರ್ತನೆ ಮಾಡುವ ಸೂಕ್ಷ್ಮ ಸ್ವರೂಪದ ಮಾಯೆಯ ನರಳಿನಿಂದ ಸದಾ

ತಮ್ಮನ್ನು ಸುರಕ್ಷಿತವಾಗಿ 'ಇಟ್ಟುಕೊಳ್ಳಿರಿ. ಏಕೆಂದರೆ ವಿಶೇಷವಾಗಿ ಮಾಯೆಯ ಸ್ವರೂಪವು ವಿಶೇಷವಾಗಿ ಈ ಸ್ವರೂಪದಲ್ಲಿ(ಸುಳ್ಳನ್ನು ಸತ್ಯ) ತನ್ನ ಕಾರ್ಯವನ್ನು ಮಾಡುತ್ತಿದೆ. ತಿಳಿಯಿತೆ? ಈಗ ಏನು ಮಾಡುವಿರಿ? ಹುಷರಾಗಿ ಇರಬೇಕು. ಒಂದುವೇಳೆ ಯಾವುದೇ ವಿಶೇಷ ಆತ್ಮರು ಸೂಚನೆ ಕೊಟ್ಟರೆ, ಬಹಳ ಚೆನ್ನಾಗಿ ಮಾಯೆಯ ಈನೆರಳಿನಿಂದ ಹೊರಬಂದು ತಂದೆಯ ಛತ್ರಛಾಯೆಯಲ್ಲಿ ತಮ್ಮನ್ನು, ವಿಶೇಷವಾಗಿ ಮನಸ್ಸು-ಬುದ್ಧಿಯನ್ನು ಈ ಛತ್ರಛಾಯೆಯ ಆಶ್ರಯದಲ್ಲಿಡಿ. ಏಕೆಂದರೆ ಮನಸ್ಸಿನಲ್ಲಿ ನಕಾರಾತ್ಮಕ ಭಾವ ಮತ್ತು ಭಾವನೆಯನ್ನು ಉತ್ಪನ್ನ ಮಾಡುವುದರಲ್ಲಿ ಮಾಯೆಯ ಪ್ರಭಾವ ವಿಶೇಷವಾಗಿ  ನಡೆಯುತ್ತಿದೆ. ಹೇಗೆ ಯಾವ ಸೀಜನ್ನಿನ ಸುರಕ್ಷತೆಗಾಗಿ ಅದರನುಸಾರ ವಿಶೇಷ ಗಮನವನ್ನಿಡಲಾಗುವುದೋ, ಹೇಗೆ ಮಳೆಗಾಲ ಬಂದರೆ ಛತ್ರಿ. ರೈನ್ ಕೋಟ್ ಇತ್ಯಾದಿಯನ್ನಿಡುವ ಗಮನವನ್ನಿಡುತ್ತಾರೆ. ಚಳಿಗಾಲದಲ್ಲಿ ಸ್ವೆಟರ್..... ಇತ್ಯಾದಿಯನ್ನಿಡುವ ಗಮನವನ್ನು ಕೊಡುವರಲ್ಲವೆ. ಅಂದಾಗ ಮನಸ್ಸು ಹಾಗೂ ಬುದ್ಧಿಯ ಮೇಲೆ ವಿಶೇಷ ಸಾಧನ, ಬಹಳ ಸಹಜವೂ ಆಗಿದೆ. ಒಂದೇ 'ಬಿಂದು' ಶಬ್ದವನ್ನು ಮುಂಚೆಯೇ ತಿಳಿಸಿದ್ದೇವಲ್ಲವೆ. ಸಹಜವಲ್ಲವೆ. ಬಹಳ ದೊಡ್ಡದಾಗಿರುವುದನ್ನಂತು ತಿಳಿಸಿಲ್ಲವಲ್ಲವೆ. ಹೇಳುತ್ತಿರುತ್ತಾರೆ- ನಾನು ಆತ್ಮ ಬಿಂದುವಾಗಿದ್ದೇನೆ, ಜ್ಯೋತಿ ರೂಪದಲ್ಲಿದ್ದೇನೆ ಆದರೆ ಅದರಲ್ಲಿ ಸ್ಥಿತರಾಗುವುದೇ ಇಲ್ಲ. ಬಿಂದು ಸ್ವರೂಪದಲ್ಲಿ ಸ್ಥಿತರಾಗಲು ಬಯಸುತ್ತಾರೆ ಆದರೆ ಪ್ರಶ್ನಾರ್ಥಕ ಚಿಹ್ನೆ ಮತ್ತು ಆಶ್ಚರ್ಯದ ಚಿಹ್ನೆಯಾಗಿಬಿಡುತ್ತದೆ. ಬಿಂದುವನ್ನಿಡುವುದು ಸಹಜವೇ ಅಥವಾ ಆಶ್ಚರ್ಯದ ಚಿಹ್ನೆ, ಪ್ರಶ್ನಾರ್ಥಕ ಚಿಹ್ನೆಯನ್ನಿಡುವುದು ಸಹಜವೇ? ಯಾವುದು ಸಹಜವಾಗಿದೆ? ಬಿಂದುವನ್ನಿಡುವುದು ಸಹಜವಲ್ಲವೆ. ಅದರ ನಂತರ ಪ್ರಶ್ನಾರ್ಥಕ ಮತ್ತು ಆಶ್ಚರ್ಯ ಸೂಚಕದಲ್ಲೇಕೆ ಹೊರಟುಹೋಗುವಿರಿ? ಈ ವಿಧಿಯನ್ನು ಉಪಯೋಗಿಸಿರಿ. ಈಗ ಸೀಜನ್ ಇರುವುದೇ ಅಸತ್ಯ, ಸತ್ಯವು ಸಿದ್ಧವಾಗುವ ಮತ್ತು ಅಸತ್ಯ, ಸತ್ಯಕ್ಕಿಂತಲೂ ಸ್ಪಷ್ಟ ಹಾಗೂ ಆಕರ್ಷಕವಾಗಿ ಇರುತ್ತದೆ. ಇತ್ತೀಚೆಗೆ ಅಸತ್ಯವಾದ ವಸ್ತುವು ಎಷ್ಟೊಂದು ಆಕರ್ಷಣೀಯವಾಗಿ ಇರುತ್ತದೆ. ಅದರಮುಂದೆ ಸತ್ಯವಾಗಿರುವುದರ ಬೆಲೆಯೇ ಕಡಿಮೆಯಾಗಿಬಿಡುತ್ತದೆ, ಇದು ಈಗಿನ ಫ್ಯಾಷನ್ ಆಗಿದೆಯಲ್ಲವೇ. ಅಪ್ಪಟ ಬೆಳ್ಳಿಯನ್ನು ನೋಡಿ ಮತ್ತು ವೈಟ್ ಸಿಲ್ವರ್ ಸದಾ ಹೊಳೆಯುತ್ತಿರುತ್ತದೆ. ಅಂದಾಗ ಆಕರ್ಷಣೆ ವೈಟ್ ಸಿಲ್ವರ್ ಮಾಡುತ್ತದೆಯೇ ಅಥವಾ ಸತ್ಯವಾಗಿರುವ ಬೆಳ್ಳಿಯು ಮಾಡುವುದೇ? ಹಾಗಾದರೆ ಸೀಜನನ್ನು ಗುರುತಿಸಿರಿ. ಮಾಯೆಯ ಸ್ವರೂಪವನ್ನು ಗುರುತಿಸಿರಿ. ಪ್ರಕೃತಿಯ ತಮೋಗುಣದ ಭಿನ್ನ-ಭಿನ್ನ ರಂಗನ್ನು ಗುರುತಿಸಿರಿ. ಒಂದಾಗಿದೆ- ತಿಳಿಯುವುದು, ಇನ್ನೊಂದು-ಗುರುತಿಸುವುದು. ಬಹಳಷ್ಟು ತಿಳಿದುಕೊಂಡಿದ್ದೀರಿ, ಗುರುತಿಸುವುದರಲ್ಲಿ ಕೆಲವೊಮ್ಮೆ ತಪ್ಪು ಮಾಡಿ ಬಿಡುತ್ತೀರಿ. ಕೆಲವೊಮ್ಮೆ ಸತ್ಯವೆಂದು ಒಪ್ಪುತ್ತೀರಿ. ಈಗ ಏನು ಮಾಡುವಿರಿ? ಸುರಕ್ಷಿತವಾಗಿ ಇರುತ್ತೀರಲ್ಲವೇ. ಹಾಗಾದರೆ ನಾವಂತು ತಿಳಿಯಲಿಲ್ಲ, ಈ ರೀತಿಯೂ ಆಗುವುದೇ? ಎಂದು ಹೇಳಬಾರದು. ಏನೇನು ನಡೆಯುವುದಿಲ್ಲ. ಈಗಂತೂ  ಬಾಬಾರವರು ಸ್ವಲ್ಪ-ಸ್ವಲ್ಪ ದಯೆ ತೋರಿಸುತ್ತಾರೆ. ಸ್ವಲ್ಪ-ಸ್ವಲ್ಪ ಹೆಜ್ಜೆಯನ್ನಿಡಿಸುತ್ತಾರೆ, ಆದರೆ ಅನಂತರ ಏನಾಯಿತೆಂದರೆ, ಏಕಾಯಿತೆಂದರೆ..... ಎಂಬ ಈ ಮಾತುಗಳನ್ನು ಕೇಳುವುದಿಲ್ಲ. ಈ ರೀತಿ ಆಗಬಾರದು, ಹಾಗೆ ಆಗಬೇಕು ಎನ್ನುವಂತಹ ವಕಾಲತ್ತು ನಡೆಯಬಾರದು. ನ್ಯಾಯಾಧೀಶರಾಗಿರಿ, ಮಾಯೆಯ ವಕಾಲತ್ತು ಮಾಡಬಾರದು. ಯಾವಾಗ ವಕಾಲತ್ತು ಮಾಡುತ್ತೀರೋ ಆಗ ಬಹಳ ಮಜಾ ಬರುತ್ತದೆ,  ಎಲ್ಲರೂ ಅನುಭವಿಯಾಗಿದ್ದೀರಲ್ಲವೆ, ಅನುಭವ ಆಗುತ್ತದೆಯಲ್ಲವೆ, ಕೇಳುತ್ತಾ-  ಕೇಳುತ್ತಾ ಸಾಕ್ಷಿಯಾಗಿ ಹರ್ಷಿತವಾಗುತ್ತಾ ಇರುತ್ತೀರಿ. ಬಹಳಚೆನ್ನಾಗಿ ತಿಳಿದಿದೆಯೇ? ಪಾಂಡವರು, ಶಕ್ತಿಯರು ತಿಳಿದಿದ್ದೀರಾ, ಟೀಚರ್ಸ್

ತಿಳಿಯಿತೇ? ಎಲ್ಲರೂ ಹೌದು-ಹೌದು ಎನ್ನುತ್ತಿದ್ದಾರೆ. ಹೌದು ಎನ್ನುವುದರ ಭಾವಚಿತ್ರವನ್ನು ತೆಗೆದುಕೊಳ್ಳುತ್ತಿದ್ದಾರೆ. ಮೂರನೆಯ ಸೀಸನ್- ವಿಶೇಷವಾಗಿ ಬಲಹೀನ ಸ್ವಭಾವ ಸಂಸ್ಕಾರಗಳು, ಸಂಬಂಧ-ಸಂಪರ್ಕಗಳಲ್ಲಿ ಬರುವುದು. ಇದರ ವಿಸ್ತಾರ ಬಹಳ ದೊಡ್ಡದು ಅದು ಇಂದು ಹೇಳುವುದಿಲ್ಲ ಕೆಲ ಮಕ್ಕಳು ಹೇಳುತ್ತಿದ್ದಾರೆ ಮೊದಲು ಹೀಗಿರಲಿಲ್ಲ ಈಗ ಏನಾಗಿದೆಯೋ ತಿಳಿಯುತ್ತಿಲ್ಲ ಎನ್ನುತ್ತಿದ್ದಾರೆ. ಈ ಸಂಸ್ಕಾರ ನನ್ನಲ್ಲಿ ಇರಲಿಲ್ಲ ಈಗ ಬಂದುಬಿಟ್ಟಿದೆ ಎಂದು ಹೇಳುತ್ತಿದ್ದಾರೆ. ಇದಕ್ಕೆ ಕಾರಣ ಮತ್ತು ವಿಧಿಯ ವಿಸ್ತಾರ ಮತ್ತೊಮ್ಮೆ ತಿಳಿಸುತ್ತೇನೆ ಒಳ್ಳೆಯದು.

**ಬಾಪ್‌ದಾದಾರವರ ಮಹಾ ವಾಕ್ಯಗಳನ್ನು ಕೇಳುವ ಮತ್ತು ಧಾರಣೆ ಮಾಡುವ ನಾಲ್ಕು ಕಡೆಯ ಛಾತ್ರಕರಿಗೆ, ಎಲ್ಲಾ ಸಬ್ಜೆಕ್ಟ್ ಗಳನ್ನು ಸ್ಮೃತಿಯೊಂದಿಗೆ ಸ್ವರೂಪದಲ್ಲಿ ತರುವ ಸಮೀಪ ಆತ್ಮರಿಗೆ, ಸದಾ ಜ್ಞಾನದ ಪ್ರತಿಯೊಂದು ವಿಷಯವನ್ನು ಲೈಟ್ ಮತ್ತು ಮೈಟ್ ಸ್ವರೂಪವಾಗಿ ಕಾರ್ಯದಲ್ಲಿ ಉಪಯೋಗಿಸುವ ಶ್ರೇಷ್ಠಾತ್ಮರಿಗೆ, ಸದಾ ಲಕ್ಷ್ಯ ಮತ್ತು ಲಕ್ಷಣಗಳನ್ನು ಸಮಾನವಾಗಿ ಇಟ್ಟುಕೊಳ್ಳುವ ಜ್ಞಾನಿ ಆತ್ಮರಾದ ತಂದೆಯ ಮಕ್ಕಳಿಗೆ, ಸದಾ ತಂದೆಯ ಛತ್ರಛಾಯೆಯಲ್ಲಿ ಇರುವವರಿಗೆ ಮಾಯೆಯ ಛಾಯೆಯಿಂದ ಸುರಕ್ಷಿತವಾಗಿರುವವರಿಗೆ, ತಿಳಿಯುವುದು ಮತ್ತು ಗ್ರಹಿಸುವುದು ಎರಡರ ವಿಶೇಷತೆಯನ್ನು ಜೀವನದಲ್ಲಿ ತರುವ ವಿಶೇಷ ಆತ್ಮರಿಗೆ, ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ದಾದಿಯವರೊಂದಿಗೆ ವಾರ್ತಾಲಾಪ.**

ಶಕ್ತಿ ಸೇನೆಯು ತೀವ್ರಗತಿಯಿಂದ ಸಾಗುತ್ತಿದೆಯಲ್ಲವೆ. ಬಾಪ್ ದಾದಾರವರ ಜೊತೆಗೆ ತಾವು ನಿಮಿತ್ತರಾಗಿರುವ ಅತ್ಮರೂ ಸಹ ಸೇನೆಯನ್ನು ಮುಂದೆ ಸಾಗುವಂತೆ ಮಾಡುವುದಕ್ಕೆ ನಿಮಿತ್ತವಾಗಿದ್ದೀರಿ. ತಂದೆಯವರಂತು ಸದಾ ಜೊತೆಯಿರುತ್ತಾರೆ ಹಾಗೂ ಸದಾಕಾಲವೂ ಇರುತ್ತಾರೆ. ಆದರೂ ಸಹ ಬಾಪ್‌ದಾದಾರವರ ಶ್ರೇಷ್ಠ ಭುಜಗಳಂತು ಆಗಿದ್ದೀರಲ್ಲವೆ. ತಂದೆಯವರು ಶಕ್ತಿ ಕೊಡುತ್ತಾರೆ. ತಂದೆಯು ಶಕ್ತಿರೂಪದಲ್ಲಿ ಇದ್ದಾರೆ ಆದರೆ ನಿಮಿತ್ತವಾಗಿ ತಿಳಿಸುವುದಕ್ಕಾಗಿ ತಾವು ಮೈಕ್ ನಿಮಿತ್ತವಾಗಿದ್ದೀರಿ. ಎಷ್ಟೊಂದು ಖುಷಿಯ ಮಾತುಗಳನ್ನು ಕೇಳುತ್ತೀರಿ. ಆಟವೆನಿಸುತ್ತದೆ ಅಲ್ಲವೆ, ಆಟವಲ್ಲವೆ. ಆಟ-ಆಟದಲ್ಲಿ ವಿಜಯಿಗಳಾಗಿ ಎಲ್ಲರನ್ನೂ ಮಾಯಾಜೀತ್ ವಿಜಯಿಗಳನ್ನಾಗಿ ಮಾಡಲೇಬೇಕು. ಇದಂತೂ ಗ್ಯಾರಂಟಿ ಎಂಬಂತೆಯೇ ಇದೆ ಆದರೆ ಮಧ್ಯ-ಮಧ್ಯದಲ್ಲಿ ಈ ಆಟವನ್ನು ನೋಡಬೇಕಾಗುತ್ತದೆ. ಇದರಿಂದ ಸುಸ್ತಾಗಿಲ್ಲ ಅಲ್ಲವೆ? ನಗುತ್ತಾ, ಆಡುತ್ತಾ, ಪಾರು ಮಾಡುತ್ತಾ ಹಾಗೂ ಮಾಡಿಸುತ್ತಾ ಸಾಗಿರಿ. ಯಾವುದೇ ಅಂತಹ ಮಾತುಗಳನ್ನು ಕೇಳಿದಾಗ ಹೃದಯದಿಂದ ಏನು ಬರುತ್ತದೆ? ವಾಹ್ ಡ್ರಾಮಾ ವಾಹ್! ಅಯ್ಯೋ ಡ್ರಾಮಾ ಅಯ್ಯೋ ಎನ್ನುವುದು ಬರುವುದಿಲ್ಲ. ವಾಹ್ ಡ್ರಾಮಾ! ವಾಹ್-ವಾಹ್ ಮಾಡುತ್ತಾ ಎಲ್ಲರೂ ವಾಹ್ ವಾಹ್ ಆಗಲೇಬೇಕು. ಇದನ್ನು ಎಲ್ಲರೂ ಪಾರು ಮಾಡಲೇಬೇಕು. ಒಳ್ಳೆಯದು-

**ಅವ್ಯಕ್ತ ಬಾಪ್‌ದಾದಾರವರ ವ್ಯಕ್ತಿಗತ ವಾರ್ತಾಲಾಪ.**

ವಿಜಯ ನಮ್ಮ ಜನ್ಮಸಿದ್ಧ ಅಧಿಕಾರವಾಗಿದೆ. ಈ ನಿಶ್ಚಯ ಹಾಗೂ ನಶೆಯಿಂದ ನಿರ್ವಿಘ್ನ ಸ್ಥಿತಿಯ ಅನುಭವ ಮಾಡಿರಿ

ಹೇಗೆ ಸರ್ವ ಶ್ರೇಷ್ಠವಾದ ತಂದೆಯೋ ಹಾಗೆಯೇ ನಾವು ಆತ್ಮರೂ ಸಹ ಶ್ರೇಷ್ಠಕ್ಕಿಂತಲೂ ಶ್ರೇಷ್ಠವಾದ ಆತ್ಮರಾಗಿದ್ದೇವೆ ಎಂಬ ಅನುಭವ ಮಾಡುತ್ತಾ ಸಾಗುತ್ತಿದ್ದೀರಾ? ಏಕೆಂದರೆ ಪ್ರಪಂಚದವರಿಗಾಗಿ ಅತ್ಯಂತ ಶ್ರೇಷ್ಠಾತಿಶ್ರೇಷ್ಠವಾದವರು ತಂದೆ. ಅವರ ನಂತರ ದೇವತೆಗಳು. ಆದರೆ ದೇವತೆಗಳಿಗಿಂತಲೂ ಶ್ರೇಷ್ಠವಾದವರು ತಾವು ಬ್ರಾಹ್ಮಣ ಆತ್ಮರಾಗಿದ್ದೀರಿ, ಫರಿಶ್ತೆಗಳಾಗಿದ್ದೀರಿ- ಇದನ್ನು ಪ್ರಪಂಚದವರು ತಿಳಿದುಕೊಂಡಿಲ್ಲ. ದೇವತಾ ಪದವಿಯು ಈ ಬ್ರಾಹ್ಮಣ ಜೀವನಕ್ಕಿಂತಲೂ ಶ್ರೇಷ್ಠವೆಂದು ಹೇಳುವುದಿಲ್ಲ. ಈಗಿನ ಬ್ರಾಹ್ಮಣ ಜೀವನವು ಶ್ರೇಷ್ಠವಾದುದು. ದೇವತೆಗಳಿಗಿಂತಲೂ ಶ್ರೇಷ್ಠರು ಆಗಿದ್ದಿರಿ- ಏಕೆ. ಅದನ್ನಂತು ಬಹಳ ಚೆನ್ನಾಗಿಯೇ ತಿಳಿದುಕೊಂಡಿದ್ದೀರಲ್ಲವೆ. ದೇವತಾ ರೂಪದಲ್ಲಿ ತಂದೆಯ ಜ್ಞಾನವು ಇಮರ್ಜ್ ಆಗಿರುವುದಿಲ್ಲ. ಪರಮಾತ್ಮನ ಮಿಲನದ ಅನುಭವವೂ ಸಹ ಇದೇ ಬ್ರಾಹ್ಮಣ ಜೀವನದಲ್ಲಿಯೇ ಮಾಡುತ್ತೀರಿ ದೇವತಾ ಜೀವನದಲ್ಲಲ್ಲ. ಬ್ರಾಹ್ಮಣರೇ ದೇವತೆಗಳಾಗುತ್ತಾರೆ ಆದರೆ ಈ ಸಮಯದಲ್ಲಿ ದೇವತಾ ಜೀವನಕ್ಕಿಂತಲೂ ಶ್ರೇಷ್ಠರೆನ್ನುವ ನಶೆಯು ಸದಾ ಇರಲಿ, ಕೆಲವೊಮ್ಮೆಗಲ್ಲ. ಏಕೆಂದರೆ ತಂದೆಯು ಅವಿನಾಶಿ ಹಾಗೂ ಅವಿನಾಶಿ ತಂದೆಯು ಯಾವ ತಿಳುವಳಿಕೆಯನ್ನು ಕೊಡುತ್ತಾರೆಯೋ ಅದೂ ಅವಿನಾಶಿಯಾದುದು. ಯಾವ ಸ್ಮೃತಿಯನ್ನು ತರಿಸುತ್ತಿದ್ದಾರೆಯೋ ಅದೂ ಅವಿನಾಶಿಯಾದುದು. ಕೆಲವೊಮ್ಮೆಯದಲ್ಲ. ಅಂದಮೇಲೆ ಇದನ್ನು ಪರಿಶೀಲನೆ ಮಾಡಿಕೊಳ್ಳಿರಿ- ಸದಾ ಈ ನಶೆಯಿರುತ್ತದೆಯೋ ಅಥವಾ ಕೆಲವೊಮ್ಮೆಗೆ ಇರುತ್ತದೆಯೇ? ಯಾವಾಗ ಸದಾ ಇರುವುದೋ ಆಗಲೇ ಮಜಾ ಬರುತ್ತದೆ. ಕೆಲವೊಮ್ಮೆ ಇರುತ್ತದೆ. ಕೆಲವೊಮ್ಮೆ ಇರುವುದಿಲ್ಲವೆಂದರೆ ಕೆಲವೊಮ್ಮೆ ಮಹಾಖುಷಿ ಇರುತ್ತದೆ. ಕೆಲವೊಮ್ಮೆಗೆ ಬೇಸರವಾಗುತ್ತೀರಿ. ಆದ್ದರಿಂದ ಈಗೀಗ ಮಜಾ. ಈಗೀಗ ಬೇಸರವಲ್ಲ. ಸದಾ ಖುಷಿಯಿರಲಿ. ಹೇಗೆ ಈ ಶ್ವಾಸವು ಸದಾ ನಡೆಯುತ್ತಿರುತ್ತದೆ. ಒಂದುವೇಳೆ ಒಂದು ಸೆಕೆಂಡಿಗಾದರೂ ನಿಂತುಬಿಟ್ಟರೆ ಅಥವಾ ಕೆಲಕೆಲವೊಮ್ಮೆ ನಡೆಯುತ್ತಿದ್ದರೆ ಅದಕ್ಕೆ ಜೀವನವೆಂದು ಹೇಳುವರೇ? ಅದೇರೀತಿ ಈ ಬ್ರಾಹ್ಮಣ ಜೀವನದಲ್ಲಿ ನಿರಂತರ ಮಹಾಖುಷಿಯಲ್ಲಿ ಇದ್ದೀರಾ? ಒಂದುವೇಳೆ ಇಲ್ಲದಿದ್ದರೆ ಅವಶ್ಯವಾಗಿ ಬೇಸರವಿದೆ. ಮಾತೆಯರು ಸದಾ ಖುಷಿಯಲ್ಲಿ ಇರುತ್ತಿರಾ? ಶಕ್ತಿಯರು ಇದ್ದೀರಲ್ಲವೆ, ಸಾಧಾರಣರಂತು ಆಗುವುದಿಲ್ಲವೇ ಅಥವವಾ ಮನೆಗೆ ಹೋದಾಗ ಸಾಧಾರಣ ಮಾತೆಯರಾಗಿಬಿಡುವಿರಾ? "ಇಲ್ಲ, ಸದಾ ಇದೇ ನೆನಪಿರಲಿ- ನಾವು ಶಕ್ತಿಯರು, ಅಲ್ಪಕಾಲಕ್ಕಲ್ಲ ಬೇಹದ್ದಿನ ವಿಶ್ವ ಕಲ್ಯಾಣಕಾರಿ ಆಗಿದ್ದೇವೆ' ಶಕ್ತಿಯರೆಂದರೆ ಅಸುರರ ಮೇಲೆ ವಿಜಯವನ್ನು ಪ್ರಾಪ್ತಿ ಮಾಡಿಕೊಳ್ಳುವವರು, ಶಕ್ತಿಯರಿಗೇ ಅಸುರ ಸಂಹಾರಿಣಿ. ' ಎಂದು ಹೇಳುತ್ತಾರೆ ಅಂದರೆ ಆಸುರೀ ಸಂಸ್ಕಾರವನ್ನು ಸಂಹಾರ ಮಾಡುವವರು. ಹಾಗಾದರೆ ಎಲ್ಲರೂ ಇಂತಹ ಶಕ್ತಿಯರು ಆಗಿದ್ದೀರಾ? ಹಾಗಯೇ ಪಾಂಡವರು ಎಂದರೆ ವಿಜಯಿ, ಪಾಂಡವರೆಂದಿಗೂ ಹೀಗೆ ಹೇಳಲು ಸಾಧ್ಯವಿಲ್ಲ- ನಾವೇನು ಬಯಸುವುದಿಲ್ಲ ಆದರೆ ಸೋಲುಂಟಾಗುತ್ತದೆ. ಏಕೆಂದರೆ ಅರ್ಧಕಲ್ಪ ಸೋತಿದ್ದೀರಿ. ಈಗ ವಿಜಯ ಪ್ರಾಪ್ತಿ ಮಾಡಿಕೊಳ್ಳುವ ಸಮಯವಾಗಿದೆ ಆದ್ದರಿಂದ ವಿಜಯದ ಸಮಯದಲ್ಲಿಯೂ ಸೋಲುತ್ತೀರೆಂದರೆ, ಮತ್ತೆ ಯಾವಾಗ ವಿಜಯಿಗಳಾಗುವಿರಿ? ಆದ್ದರಿಂದ ಈ ಸಮಯದಲ್ಲಿ ಸದಾ ವಿಜಯಿ. ವಿಜಯ ಜನ್ಮಸಿದ್ಧ ಅಧಿಕಾರವಾಗಿದೆ. ಅಧಿಕಾರವೆನ್ನೆಂದೂ ಬಿಡಬಾರದು. ಯುದ್ಧ-ಜಗಳ ಮಾಡಿಯಾದರೂ ತೆಗೆದುಕೊಳ್ಳುತ್ತಾರೆ. ಇಲ್ಲಂತು ಸಹಜವಾಗಿ ಸಿಗುತ್ತದೆ. ವಿಜಯ ತಮ್ಮ ಜನ್ಮಸಿದ್ಧ ಅಧಿಕಾರವಾಗಿದೆ. ಅಧಿಕಾರದ ನಶೆ ಅಥವಾ ಖುಷಿ ಇರುತ್ತದೆ ಅಲ್ಲವೇ? ಅಲ್ಪಕಾಲದ ಅಧಿಕಾರದಲ್ಲಿಯೇ ಎಷ್ಟೊಂದು ನಶೆಯಿರುತ್ತದೆ! ಪ್ರಧಾನ ಮಂತ್ರಿಯೇನಾದರೂ ನಾನು ಪ್ರಧಾನ ಮಂತ್ರಿ ಎನ್ನುವುದನ್ನು ಮರೆಯುತ್ತಾರೆಯೇ? ಮಲಗುವಾಗ, ಆಹಾರ ಸೇವನೆ

ಮಾಡಬೇಕಾದರೂ ನಾನು ಪ್ರಧಾನ ಮಂತ್ರಿ ಎನ್ನುವುದನ್ನು ಮರೆಯುತ್ತಾರೆಯೇ? ಹಾಗಾದರೆ ಅಲ್ಪಕಾಲದ ಅಧಿಕಾರ ಮತ್ತು ಬೇಹದ್ದಿನ ಅಧಿಕಾರವನ್ನು ಯಾರೆಷ್ಟಾದರೂ ಮರೆಸಲು ಪ್ರಯತ್ನಿಸಿದರೂ ಮರೆಯಲು ಸಾಧ್ಯವಿಲ್ಲ. ಮಾಯೆಯ ಕಾರ್ಯವೇ ಮರೆಸುವುದು ಮತ್ತು ತಮ್ಮ ಕಾರ್ಯ ವಿಜಯಿಗಳಾಗುವುದು ಏಕೆಂದರೆ ವಿಜಯ ಮತ್ತು ಸೋಲು ಎಂದರೆ ಏನು? ಎನ್ನುವುದು ತಿಳಿದಿದೆಯಲ್ಲವೆ. ಸೋಲಿನ ಅನುಭವಿಯೂ ಆಗಿದ್ದೀರಿ. ವಿಜಯದ ಅನುಭವಿಯೂ ಆಗಿದ್ದೀರಿ ಅಂದಮೇಲೆ ಸೋಲನ್ನನುಭವಿಸುವುದರಿಂದ ಏನಾಗುತ್ತದೆ, ವಿಜಯ ಪ್ರಾಪ್ತಿಯಾದರೆ ಏನಾಗುತ್ತದೆ- ಎರಡರ ಅಂತರವನ್ನು ತಿಳಿದಿದ್ದೀರಿ ಆದ್ದರಿಂದ ಸದಾ ವಿಜಯಿಯಾಗಿದ್ದೀರಿ ಮತ್ತು ಸದಾ ಆಗಿರುತ್ತೀರಿ ಏಕೆಂದರೆ ಅವಿನಾಶಿ ತಂದೆ ಹಾಗೂ ಅವಿನಾಶಿ ಪ್ರಾಪ್ತಿಯ ಅಧಿಕಾರಿಗಳು ನಾವು ಆತ್ಮರಾಗಿದ್ದೇವೆ ಎನ್ನುವುದು ಸದಾ ಪ್ರತ್ಯಕ್ಷ ರೂಪದಲ್ಲಿರಲಿ. ಈ ರೀತಿ ಇಲ್ಲದಿದ್ದರೆ! ಆಗುವುದಂತು ಆಗಿದ್ದೇವೆ! ತಿಳಿದಿದ್ದೇವೆ! ಈ ರೀತಿಯಲ್ಲ, ಪ್ರತ್ಯಕ್ಷದಲ್ಲಿರಬೇಕು. ಯಾರು ತಿಳಿದಿರುತ್ತಾರೆಯೋ ಅವರೇ ನಿಶ್ಚಯದಿಂದ ನಡೆಯುತ್ತಾರೆ. ಹಾಗಾದರೆ ಪ್ರತಿಯೊಂದು ಕರ್ಮದಲ್ಲಿ ವಿಜಯದ ನಿಶ್ಚಯ ಹಾಗೂ ನಶಯಿರಲಿ. ನಶೆಯ ಆಧಾರವೇ ನಿಶ್ಚಯವಾಗಿದೆ. ನಿಶ್ಚಯದ ಕೊರತೆಯಿದ್ದರೆ ನಶೆಯೂ ಕಡಿಮೆಯಾಗುವುದು. ಆದ್ದರಿಂದ ನಿಶ್ಚಯಬುದ್ಧಿ ವಿಜಯಂತಿ ಎಂದು ಹೇಳುತ್ತಾರೆ ಹಾಗಾದರೆ ಬುನಾದಿ ಯಾವುದು? ನಿಶ್ಚಯ. ನಿಶ್ಚಯದಲ್ಲಿ ಕೆಲವೊಮ್ಮೆಗೆ ಆಗುವವರು ಆಗಬಾರದು. ಇಲ್ಲದಿದ್ದರೆ ಅಂತ್ಯದಲ್ಲಿ ಫಲಿತಾಂಶದ ಸಮಯದಲ್ಲಿನ ಪ್ರಾಪ್ತಿಯು ಕೆಲವೊಮ್ಮೆಯದಾಗುವುದು. ನಂತರ ಪಶ್ಚಾತ್ತಾಪ ಪಡಬೇಕಾಗುತ್ತದೆ. ಈಗ ಪ್ರಾಪ್ತಿಯಾಗಿದೆ. ನಂತರ ಪಶ್ಚಾತ್ತಾಪವಾಗುವುದು ಆದ್ದರಿಂದ ಪ್ರಾಪ್ತಿಯ ಸಮಯದಲ್ಲಿ ಪ್ರಾಪ್ತಿ ಮಾಡಿಕೊಳ್ಳಿರಿ. ಪಶ್ಚಾತ್ತಾಪದ ಸಮಯದಲ್ಲಿ ಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಮಾಡಿಬಿಡುತ್ತೇವೆ, ಆಗಿಬಿಡುತ್ತೇವೆ ಎನ್ನುವುದಲ್ಲ. ಮಾಡಲೇಬೇಕು ಎಂಬ ನಿಶ್ಚಯವಿರಲಿ. ಮಾಡಿಬಿಡುತ್ತೇವೆ. ಈ ಆಶೆಯಿಂದ ನಡೆಯಬಾರದು. ಮಾಡುತ್ತಿದ್ದೇವೆ ಅಲ್ಲವೆ.... ಮತ್ತೇನಾಗುತ್ತದೆ.... ಆಗಿಬಿಡುತ್ತೇವೆ.... ಎನ್ನುವುದಲ್ಲ. ಈಗ ಆಗಬೇಕಾಗಿದೆ. ಯಾವಾಗ ಅನ್ಯರಿಗೂ ಚಾಲೆಂಜ್ ಮಾಡುತ್ತೀರಿ- ಶ್ವಾಸದ ಮೇಲೆ ಯಾವುದೇ ಭರವಸೆಯಿಲ್ಲ, ಅನ್ಯರಿಗೂ ಜ್ಞಾನ ಕೊಡುತ್ತೀರಲ್ಲವೆ. ಮೊದಲು ತಮಗೆ ತಾವು ಜ್ಞಾನ ಕೊಡಿ. ಯಾವಾಗಲೋ ಮಾಡುವವರಾಗಿದ್ದೀರಾ ಅಥವಾ ಈಗ ಮಾಡುವವರಾಗಿದ್ದೀರಾ? ಹಾಗಾದರೆ ಸದಾ ವಿಜಯದ ಅಧಿಕಾರಿ ಆತ್ಮರಾಗಿದ್ದೀರಿ. ವಿಜಯ ಜನ್ಮಸಿದ್ಧ ಅಧಿಕಾರವಾಗಿದೆ- ಈ ಸ್ಮೃತಿಯಿಂದ ಹಾರುತ್ತಿರಿ. ಏನಾದರೂ ಆಗಲಿ. ನಾನು ಸದಾ ವಿಜಯಿ ಆಗಿದ್ದೇನೆ ಎಂಬ ಸ್ಮೃತಿ ತಂದುಕೊಳ್ಳಿರಿ. ಏನಾದರೂ ಆಗಲಿ, ನಿಶ್ಚಯವು ಅಟಲವಾಗಿದೆ. ಯಾರೂ ಸಹ ದೂರ ಮಾಡಲು ಸಾಧ್ಯವಿಲ್ಲ.

ಒಳ್ಳೆಯದು- ಈಗ ಎಲ್ಲರೂ ಇಂತಹ ಚಮತ್ಕಾರ ಮಾಡಿ ತೋರಿಸಿರಿ. ಅದರಿಂದ ಪ್ರತಿಯೊಂದು ಸ್ಥಾನವು ವಿಜಯಿ ಅರ್ಥಾತ್ ನಿರ್ವಿಘ್ನವಾಗಿರಲಿ. ಯಾವುದೇ ವಿಘ್ನವು ಬರದಿರಲಿ, ವಿಘ್ನ ಬರುತ್ತದೆ ಆದರೆ ಸೋಲಬಾರದು. ಅಂದಾಗ ಎಲ್ಲಿ ವಿಜಯವಿದೆ, ವಿಘ್ನವು ದೂರವಾಗಿಬಿಡುತ್ತದೆಯೋ ಆಗಲೇ ನಿರ್ವಿಘ್ನವಾಗಿಬಿಡುತ್ತೀರಿ. ಸದಾ ನಿರ್ವಿಘ್ನರು- ಈ ಚಮತ್ಕಾರ ಮಾಡಿ ತೋರಿಸಿರಿ, ಗೀತಾ ಪಾಠಶಾಲೆಯೇ ಇರಲಿ, ಉಪ ಸೇವಾಕೇಂದ್ರವೇ ಆಗಿರಲಿ, ಸೇವಾ ಕೇಂದ್ರವೇ ಆಗಿರಲಿ ಆದರೆ ತಾವು ನಿರ್ವಿಘ್ನವಾಗಿ ಇರಿ ಹಾಗೂ ಅನ್ಯರನ್ನೂ ನಿರ್ವಿಘ್ನರನ್ನಾಗಿ ಮಾಡಿರಿ. ಮಾಡಲೇಬೇಕು ಅಷ್ಟೇ. ಮಾಡುತ್ತೇವೆ, ನೋಡುತ್ತೇವೆ ಎನ್ನುವುದಲ್ಲ. ಇಂತಹ ಚಮತ್ಕಾರ ಮಾಡಿತೋರಿಸಿರಿ. ವೆ. ವೆ. ಎನ್ನುವಿರೆಂದರೆ ನಿಶ್ಚಯದಲ್ಲಿ ಕೊರತೆಯಿದೆ. ಎಲ್ಲರೂ ಇದೇ

ಖುಷಿಯ ಸಮಾಚಾರ ಕೇಳಲಿ- ಎಲ್ಲಾ ಚಿಕ್ಕಪುಟ್ಟ ಎಲ್ಲಾ, ಸೇವಾಕೇಂದ್ರಗಳು ನಿರ್ವಿಘ್ನವಾಗಿವೆ. ಯಾವುದೇ ಪ್ರಕಾರದ ವಿಘ್ನವು ಬರಲು ಸಾಧ್ಯವೇ ಇಲ್ಲ. ಅನ್ಯರ ವಿಘ್ನವನ್ನೂ ಸಮಾಪ್ತಿ ಮಾಡುತ್ತೇವೆ. ವಿಜಯಿಯಾಗುತ್ತೇವೆ. ಇಂತಹ ಸಮಾಚಾರವು ಬರಬೇಕು. ಎಲ್ಲಿಂದಲೂ ವಿಘ್ನದ ಸಮಾಚಾರ ಬರಬಾರದು. ನಾವಂತು ಸರಿಯಿದ್ದೇವೆ. ಇವರು ಮಾಡುತ್ತಾರೆಂದರೆ ನಾವೇನು ಮಾಡುವುದು ಎನ್ನಬಾರದು. ಮೂರು ತಿಂಗಳು ವಿಜಯಿಯಾಗಿದ್ದು ತೋರಿಸಿರಿ. ಮೂರು ತಿಂಗಳಿನಲ್ಲಿಯೇ ಗೊತ್ತಾಗಿಬಿಡುತ್ತದೆ. ಎಲ್ಲರೂ ಆಯಿತು ಎನ್ನುತ್ತೀರೆಂದರೆ ಚಮತ್ಕಾರ ಮಾಡಿ ತೋರಿಸಿರಿ.

ರಿವೈಸ್ ಕೋರ್ಸ್ 10-01-1994.

***ವರ್ತಮಾನ ಸೀಸನ್‌ನಲ್ಲಿ ಬಿಂದು ಎಂಬ ಶಬ್ದವನ್ನು ಮೂರು ರೂಪಗಳಲ್ಲಿ ಸ್ಮೃತಿ ಅಥವಾ ಸ್ವರೂಪದಲ್ಲಿ ತರುವುದೇ ಸುರಕ್ಷತೆಯ ಸಾಧನವಾಗಿದೆ.***

ನಂಬರ್‌ವಾರ್ ಆಗಲು ವಿಶೇಷ ಆಧಾರ ಒಂದೇ ಶಬ್ದ ಬಿಂದು, 1. ಬಿಂದು ಸ್ವರೂಪವನ್ನು ಅನುಭವ ಮಾಡುವುದು. 2. ಯಾವುದೇ ಸಂಕಲ್ಪ, ಮಾತು ಅಥವಾ ಕರ್ಮವು ವ್ಯರ್ಥವಾದರೆ ಅದಕ್ಕೆ ಬಿಂದುವಿಡುವುದು. 3. ಜ್ಞಾನದ ಅಥವಾ ಧಾರಣೆಯ ಅನೇಕ ಬಿಂದುಗಳನ್ನು ಮನನ ಮಾಡುತ್ತಾ ಸ್ವಯಂನಪ್ರತಿ ಅಥವಾ ಸೇವೆಗಾಗಿ ಕಾರ್ಯದಲ್ಲಿ ಉಪಯೋಗಿಸುವುದು. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ವಿಶ್ವಕಲ್ಯಾಣಕಾರಿ ಬಾಪ್‌ದಾದಾರವರ ಮಾಸ್ಟರ್ ವಿಶ್ವಕಲ್ಯಾಣಕಾರಿ.

2. ನನ್ನ ಲಕ್ಷ್ಯ ಮತ್ತು ಲಕ್ಷಣಗಳು ಸಮಾನವಾಗಿ ಇವೆ.

3. ನಾನು ಬಿಂದು ಸ್ವರೂಪವನ್ನು ಅನುಭವ ಮಾಡಿಕೊಂಡಿದ್ದೇನೆ, ಯಾವುದೇ ಸಂಕಲ್ಪ ಅಥವಾ ಕರ್ಮವು ವ್ಯರ್ಥವಿದ್ದರೆ ಅದಕ್ಕೆ ಬಿಂದುವನ್ನು ಇಟ್ಟಿದ್ದೇನೆ, ಜ್ಞಾನದ ಅಥವಾ ಧಾರಣೆಯ ಅನೇಕ ಬಿಂದುಗಳನ್ನು ಮನನ ಮಾಡುತ್ತಾ ಸ್ವಯಂನ ಪ್ರತಿ ಅಥವಾ ಸೇವೆಗಾಗಿ ಸಮಯಾನುಸಾರ ಕಾರ್ಯದಲ್ಲಿ ಉಪಯೋಗಿಸಿದ್ದೇನೆ.

4. ನಾನು ತಪ್ಪು ಕರ್ಮಗಳ ಸಂಕಲ್ಪಗಳ ಅಥವಾ ತಪ್ಪಾದ ಸ್ವಭಾವ ಸಂಸ್ಕಾರಗಳಲ್ಲಿ ವಶವಾಗುವ ಸಂಸ್ಕಾರವನ್ನು ಸಮಾಪ್ತಿ ಮಾಡಿ ಜ್ಞಾನವನ್ನು ಪ್ರಕಾಶ ರೂಪದಲ್ಲಿ, ಶಕ್ತಿ ರೂಪದಲ್ಲಿ ಕಾರ್ಯದಲ್ಲಿ ಉಪಯೋಗಿಸಿರುವ ಸಮರ್ಥ ಜ್ಞಾನಿ ಸ್ವರೂಪ.

5. ನಾನು ಪ್ರಕೃತಿಯ ಭಯಾನಕ ರೂಪದಲ್ಲಿ ಕೂಡ ಅಚಲವಾಗಿದ್ದು, ಸತ್ಯವಾದ ಅನುಭೂತಿಯ ಶಕ್ತಿಯನ್ನು ಪರಿವರ್ತನೆ ಮಾಡುವ ಮಾಯೆಯ ಅತಿ ಸೂಕ್ಷ್ಮವಾದ ಸ್ವರೂಪವನ್ನು ತಿಳಿದು ಮಾಯ ಛಾಯೆಯಿಂದ ಸುರಕ್ಷಿತವಾಗಿ ಇದ್ದೇನೆ.

6. ನಾನು ಸ್ವಯಂನ್ನು, ನನ್ನ ಮನಸ್ಸು, ಬುದ್ಧಿಯನ್ನು ತಂದೆಯ ಛತ್ರಛಾಯೆಯ ಆಶ್ರಯದಲ್ಲಿ ಇಟ್ಟಿದ್ದೇನೆ.

7. ನಾನು ಪಾಯಿಂಟ್(ಬಿಂದು) ಎಂಬ ಒಂದೇ ಶಬ್ದದಿಂದ ಮನಸ್ಸು, ಬುದ್ದಿಯನ್ನು ಮಾಯೆಯಿಂದ ಸುರಕ್ಷಿತವಾಗಿ ಇಟ್ಟಿದ್ದೇನೆ.

8. ನಾನು ಮಾಯೆಯ ಸ್ವರೂಪವನ್ನು ಮತ್ತು ಪ್ರಕೃತಿಯ ಭಿನ್ನ-ಭಿನ್ನ ರಂಗನ್ನು ಗುರುತಿಸುವ ದಿವ್ಯಬುದ್ಧಿ ಸ್ವರೂಪ.